ಕಾರ್ಮಿಕರಿಗೆ ಯಾವಾಗಲೂ ಸಿಗುತ್ತಿದ್ದದ್ದು ಕನಿಷ್ಠ ವೇತನ, ಅದನ್ನು ಕೂಲಿ ಎಂದರೂ ನಡೆದೀತು. ಬ್ರಿಟಿಷ್ ಕಂಪನಿಗಳು ಕೊಡುವ ಕೂಲಿಯಿಂದ ಬದುಕು ಸಾಗಿಸಲು ಸಾಧ್ಯವಾಗದ ಗಣಿ ಕಾರ್ಮಿಕರು ಸಾಲಗಾರರ ಮೊರೆ ಹೋಗುವುದು ಅನಿವಾರ್ಯವಾಗಿತ್ತು. ಕಂಪನಿ ವೇತನ ಕೊಡುವ ದಿನ ಸಾಲಗಾರರು ಗಣಿಗಳ ಬಳಿಗೆ ತಮ್ಮ ಪಟಾಲಂ ಜೊತೆ ಆಗಮಿಸಿ ಬಡ್ಡಿ ಸಮೇತ ವೇತನವನ್ನೆಲ್ಲ ಕಿತ್ತೊಯ್ಯುತ್ತಿದ್ದರು. ಮತ್ತೆ ಗಣಿಗಾರರ ಕೈ ಬರಿದು, ಮತ್ತೆ ಸಾಲಕ್ಕಾಗಿ ಅಂಗಲಾಚಲು ಶುರು.


ಬ್ರಿಟಿಷ್ ಕಂಪನಿಗಳಿಂದ ನಿರಂತರ ಶೋಷಣೆಗೆ ಒಳಗಾದ ಕಾರ್ಮಿಕರು ಹಾಗೂ ಅವರ ಕುಟುಂಬದವರು ಕುಡಿಯಲು ನೀರಿಲ್ಲದೆ, ತಿನ್ನಲು ಆಹಾರವಿಲ್ಲದೆ ಬವಣೆಪಟ್ಟಿದ್ದು ಕೆ.ಜಿ.ಎಫ್. ಗಣಿಗಳ ಚರಿತ್ರೆಯಲ್ಲಿ ಜಾಗ ಪಡೆದುಕೊಂಡಿವೆ.

ಆಸ್ಪತ್ರೆ ಸೌಲಭ್ಯಗಳನ್ನು ಕಂಪನಿಗಳು ಶುರು ಮಾಡಿದ್ದರೂ ಗಣಿ ಕಾರ್ಮಿಕರ ಕೈಗೆ ಅವು ಎಟುಕದಂತೆ ನೋಡಿಕೊಂಡಿದ್ದವು. ಆ ಕಾಲದಲ್ಲಿ ಸಾಂಕ್ರಾಮಿಕ ರೋಗಗಳು ಆಗಾಗ ಎರಗುತ್ತಲೇ ಇದ್ದವು. ಕಾಲರಾ ಕಾಯಿಲೆ ಬಂದಾಗ ಕಣ್ಮುಚ್ಚಿದ ಕಾರ್ಮಿಕರು ದೊಡ್ಡ ಸಂಖ್ಯೆಯಲ್ಲಿ ಸಾಯುತ್ತಿದ್ದರು. ಅಪಾಯದಲ್ಲೇ ಉಸಿರಾಡುವ ಗಣಿ ಕಾರ್ಮಿಕರು ಮದ್ಯ ವ್ಯಸನಿಗಳಾಗಿ ಮಾರ್ಪಟ್ಟಿದ್ದರಿಂದ, ಅವರಿಗೆ ಸಿಗುವ ವೇತನವೂ ತೀರಾ ಕಡಿಮೆ ಆಗಿದ್ದರಿಂದ, ಗತ್ಯಂತರವಿಲ್ಲದೆ ಕಡಿಮೆ ಬೆಲೆಯ ಕಳ್ಳಬಟ್ಟಿ ಸೇವನೆಗಿಳಿದರು. ಆ ಕಾರಣದಿಂದಲೂ ಕಾರ್ಮಿಕರ ಸಾವುನೋವಿನ ಸಂಖ್ಯೆ ಹೆಚ್ಚಾಯಿತು. ಕಾರ್ಮಿಕರ ಹಿತ ರಕ್ಷಣೆಗಾಗಿ ವಿವಿಧ ಕಾರ್ಮಿಕ ಸಂಘಟನೆಗಳು ಆರಂಭವಾದರೂ ಬ್ರಿಟಿಷ್ ಕಂಪನಿಗಳು ಅವುಗಳಿಗೆ ಸೊಪ್ಪುಹಾಕಲಿಲ್ಲ. ಶೋಷಣೆ ವಿರುದ್ಧ ಪ್ರತಿಭಟಿಸಿದಾಗ ಬಲ ಪ್ರಯೋಗದಿಂದ ಹತ್ತಿಕ್ಕಿದ ಉದಾಹರಣೆಗಳು ಸಾಕಷ್ಟಿವೆ.

ನಮ್ಮ ನೆಲದ ಸಂಪತ್ತನ್ನು ಲಗುಬಗೆಯಿಂದ ಅಗೆದು ಬಗೆದು ತೆಗೆದ ಬ್ರಿಟಿಷ್ ಕಂಪನಿಗಳು



ಚಿನ್ನದ ಗಣಿಗಾರಿಕೆಯ ಕಾರ್ಮಿನ ಪ್ರತಿಮೆ



ನೂರು ವರ್ಷ ಹಿಂದೆ
ಗಣಿಕಾರ್ಮಿಕರಿಗಾಗಿ ಕಟ್ಟಿದ್ದ ಮನೆ
ಇಂದಿಗೂ ಉಳಿದುಕೊಂಡಿದೆ.

ಅದನ್ನೆಲ್ಲ ತಮ್ಮ ತವರಿಗೆ ರವಾನೆ ಮಾಡಿದ್ದರಿಂದ ನಮ್ಮ ದೇಶಕ್ಕೇನೂ ಒಳಿತಾಗಲಿಲ್ಲ. ಬ್ರಿಟಿಷ್ ಆಡಳಿತದಲ್ಲಿ ಬ್ರಿಟಿಷ್ ಕಂಪನಿಗಳ ಶೋಷಣೆಗೆ ಪೂರಕವಾದ ಒಪ್ಪಂದಗಳನ್ನು ಮಾಡಿಕೊಂಡಿದ್ದರಿಂದ ಭಾರತೀಯರು, ಮುಂದಾಳುಗಳು, ಸ್ಥಳೀಯ ಆಡಳಿತ ಮಿಸುಕಾಡಲೂ ಆಗಲಿಲ್ಲ.

ಮೈಸೂರು ರಾಜ್ಯದ ಬೊಕ್ಕಸಕ್ಕೆ ಕಂಪನಿಗಳು ರಾಜಧನ ಪಾವತಿಸುತ್ತಿದ್ದರೂ ಅದು ಗೌಣವಾಗಿತ್ತು. ಸ್ವಾತಂತ್ರ್ಯಾನಂತರವೂ ಅವೇ ಕಂಪನಿಗಳೇ ಕಾರ್ಯಾಚರಣೆ ಮಾಡುತ್ತಿದ್ದವು. ವಿಶಾಲ ಮೈಸೂರು ರಾಜ್ಯ ರಚನೆಯಾದಾಗ ಕೆ.ಜಿ.ಎಫ್. ಗಣಿಗಳನ್ನು ರಾಷ್ಟ್ರೀಕರಣಗೊಳಿಸಿ ರಾಜ್ಯಸರ್ಕಾರದ ವ್ಯಾಪ್ತಿಗೆ ತರಲಾಯಿತು. ನಂತರ ಅದು ಕೇಂದ್ರ ಸರ್ಕಾರದ ಸುಪರ್ದಿಗೆ ಬಂತು. ಬಿ.ಜಿ.ಎಂ.ಎಲ್ (ಭಾರತ್ ಗೋಲ್ಡ್ ಮೈನ್ಸ್ ಲಿ.) ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಕೋಲಾರ ಚಿನ್ನದ ಗಣಿಗಳು ಜಾಗತಿಕ ಮಟ್ಟದಲ್ಲಿ ಬಂಗಾರದ ಬೆಲೆಗಳಲ್ಲಿ ಆಗಾಗ ಆಗುವ ಏರಿಳಿತಗಳ ಪರಿಣಾಮವಾಗಿ ನಷ್ಟದ ಸುಳಿಗೆ ಸಿಕ್ಕಿಬಿದ್ದವು. ಕೇಂದ್ರ ಸರ್ಕಾರ 2001ರಲ್ಲಿ ಗಣಿಗಳನ್ನು ಸ್ಥಗಿತಗೊಳಿಸುವ ನಿರ್ಧಾರ ಮಾಡಿತು.

ಅದಿರಿನಲ್ಲಿ ಸಿಗುವ ಚಿನ್ನದ ಅಂಶದ ಇಳಿಮುಖ, ಹಳೆಯಕಾಲದ ಯಂತ್ರೋಪಕರಣಗಳಿಂದ ಕಾರ್ಯಾಚರಣೆ ವೆಚ್ಚ ಹೆಚ್ಚಳ, ಕಾರ್ಮಿಕರ ಸಂಖ್ಯೆ ಹೆಚ್ಚು – ಇವೇ ಮುಂತಾದ ಕಾರಣಗಳ ಜತೆಗೆ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಏರಿಳಿತಗಳು ಸ್ಥಗಿತಕ್ಕೆ ಕಾರಣವೆಂದು ಸರ್ಕಾರ ಹೇಳಿದೆ.

ಗಣಿಗಳಲ್ಲಿ ಕೆಲಸ ಮಾಡಿಸಲೆಂದೇ ಬ್ರಿಟಿಷರು ಹಿಡಿದು ತಂದ ನೆರೆರಾಜ್ಯಗಳ ಕಾರ್ಮಿಕರ ಮೂರು ತಲೆಮಾರುಗಳು ಕೆ.ಜಿ.ಎಫ್.ನಲ್ಲೇ ನೆಲೆನಿಂತಿವೆ. ಕೆ.ಜಿ.ಎಫ್. ಗಣಿಗಳ ಹೊನ್ನಿನ ಕೀರ್ತಿ ಆಕಾಶಕ್ಕೇರಿದರೂ ನೆಲದಾಳದಿಂದ ಜೀವ ಪಣಕ್ಕಾಗಿ ಇಟ್ಟು ಅದಿರು ತಂದು ಶುದ್ಧ ಚಿನ್ನ ಒದಗಿಸಿಕೊಟ್ಟ ಕಾರ್ಮಿಕರ ಬದುಕು ಹಸನಾಗಲೇ ಇಲ್ಲ.

## ವರ್ತಮಾನದ ಉರಿ

ಗಣಿ ಬಂದ್ ಮಾಡುವಾಗ ನೀಡಿದ ಪರಿಹಾರದ ಭರವಸೆ ಇನ್ನೂ ಪೂರ್ತಿಯಾಗಿ ಈಡೇರಿಲ್ಲ. ಕೆ.ಜಿ. ಎಫ್.ನ ಆರ್ಥಿಕ ತಳಪಾಯ ಕುಸಿದು ಬಿದ್ದು, ಇಲ್ಲಿಂದ ವಲಸೆ ಹೋಗುವವರ ಸಂಖ್ಯೆ ದಿನೇದಿನೇ ಹೆಚ್ಚುತ್ತಿದೆ. ಹೊರಜಗತ್ತಿನೊಡನೆ ಸಂಪರ್ಕಕ್ಕಾಗಿ ಬ್ರಿಟಿಷರು ಗಣಿಗಳನ್ನು ಪ್ರಾರಂಭಿಸುವ ಹೊತ್ತಿನಲ್ಲಿ ಏರ್ಪಡಿಸಿಕೊಂಡ ರೈಲು ವ್ಯವಸ್ಥೆ, ಕಂಪನಿಯ ಅಧಿಕಾರಿ–ಸಿಬ್ಬಂದಿಗಳಿಗೆ ಮಾತ್ರ ಅನುಕೂಲವಾಗಿದ್ದ ಕಾಲವೊಂದಿತ್ತು. ಚಿನ್ನವನ್ನು ಮುಂಬೈ–ಲಂಡನ್‌ಗೆ ಸಾಗಿಸಲು ರೈಲು ಸಂಪರ್ಕ ಸಂಪೂರ್ಣ ಉಪಯೋಗವಾಯಿತು. ಇದೇ ರೈಲು ಕೆ.ಜಿ.ಎಫ್. ಗಣಿಗಳು ಕಾರ್ಯಾಚರಣೆ ನಿಲ್ಲಿಸಿದ ಮೇಲೆ ಕಾರ್ಮಿಕರು ಹಾಗೂ ಕುಟುಂಬಗಳ ಜೀವನಾಡಿಯಾಗಿದೆ.

ಮತ್ತೆ ಗಣಿಗಳು ಪುನರಾರಂಭ ಆಗಬಹುದೆಂಬ ನಿರೀಕ್ಷೆಯಲ್ಲಿದ್ದ ಕಾರ್ಮಿಕರು, ಈಗೀಗ ಅದನ್ನು ಮರೆತು ದುಡಿಮೆಗೆ ಬೆಂಗಳೂರು–ಬಂಗಾರಪೇಟೆಗಳನ್ನು ಆಶ್ರಯಿಸಿದ್ದಾರೆ. ನೆಲದೊಳಗಿಂದ ಹೊರತೆಗೆದ ಚಿನ್ನ ಅವರ ಬಾಳಿಗೆ ಹೊಳಪು ನೀಡಲಿಲ್ಲ. ಆದರೆ, ಬೆಂಗಳೂರು–ಕೆ.ಜಿ. ಎಫ್. ನಡುವೆ ನಿತ್ಯ ಓಡಾಡುವ ಸ್ವರ್ಣ ಎಕ್ಸ್‌ಪ್ರೆಸ್ ಗಣಿಕಾರ್ಮಿಕರ ಬದುಕಿಗೆ ಹೊಸಬಾಗಿಲು ತೆಗೆದಿದೆ.

ಇತ್ತೀಚೆಗೆ ತೆರೆಕಂಡು ಯಶಸ್ವಿಯಾಗಿರುವ 'ಕೆಜಿಎಫ್' ಸಿನಿಮಾದ ಎರಡನೇ ಭಾಗ ಕೂಡ ದೊಡ್ಡ ಯಶಸ್ಸು ಕಂಡಿದೆ. ಕೆಜಿಎಫ್ ಹೆಸರಿಗೆ ಈಗಲೂ ಮೌಲ್ಯವಿದೆ ಎನ್ನುವುದಕ್ಕೆ ಸಿನಿಮಾದ ಯಶಸ್ಸು ಉದಾಹರಣೆಯಂತಿದೆ. ಮೌಲ್ಯ ಇಲ್ಲದಿರುವುದು ಕಾರ್ಮಿಕರ ಜೀವಕ್ಕೆ ಎನ್ನುವುದು ಅರಗಿಸಿಕೊಳ್ಳಲೇಬೇಕಾಗಿರುವ ಸತ್ಯ.

ಪ್ರತಿಕ್ರಿಯಿಸಿ: feedback@sudha.co.in